ದಿ: 03-12-2013 ರಂದು ನಡೆದ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಯ ಸಭಾ ನಡವಳಿಗಳು

ದಿನಾಂಕ 03.12.2013 ರಂದು ಮಧ್ಯಾಹ್ನ 3.00 ಗಂಟೆಗೆ ಮಾನ್ಯ ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ ರವರ ಅಧ್ಯಕ್ಷತೆಯಲ್ಲಿ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಅನುದಾನವನ್ನು ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆಯನ್ನು ರೂಪಿಸುವ ಬಗ್ಗೆ ನಿರ್ದೇಶಕರ ಕೊಠಡಿಯಲ್ಲಿ ನಡೆದ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು,**

1. ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.
2. ವೈದ್ಯಕೀಯ ಅಧೀಕ್ಷಕರು, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.
3. ಮುಖ್ಯಆಡಳಿತಾಧಿಕಾರಿಗಳು, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.
4. ಆರ್ಥಿಕ ಸಲಹೆಗಾರರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.
5. ಡಾ॥ ಹನುಮಂತ ಪ್ರಸಾದ್, ನೋಡಲ್ ಅಧಿಕಾರಿ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಸದಸ್ಯರು ಮಿಮ್ಸ್ ಮಂಡ್ಯ.
6. ಡಾ॥ ಬಿ.ಜೆ. ಮಹೇಂದ್ರ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಸದಸ್ಯರು ಮಿಮ್ಸ್ ಮಂಡ್ಯ.

ಮಾನ್ಯನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿ ಎಲ್ಲಾ ಸದಸ್ಯ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು.

**ಸಭಾ ನಡವಳಿಗಳು:**

1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 2013–14 ನೇ ಸಾಲಿನಿಂದ ಸ್ನಾತಕೋತ್ತರ, ಎಂ.ಬಿ.ಬಿ.ಎಸ್ ಹಾಗೂ ಪ್ಯಾರ ಮೆಡಿಕಲ್ ಕೋರ್ಸ್‌ಗಳಲ್ಲಿ ಹೆಚ್ಚಿನ ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಪ್ರತಿ ವರ್ಷವು, ಮೊದಲನೇ ವರ್ಷದಿಂದ ಅಂತಿಮ ವರ್ಷದ ವರೆಗಿನ ಪ್ರತಿ ತರಗತಿಯ 10 ವಿದ್ಯಾರ್ಥಿಗಳಿಗೆ (ಪರಿಶಿಷ್ಟ ಜಾತಿ–07 ಮತ್ತು ಪರಿಶಿಷ್ಟ ಪಂಗಡ–03) ವಿದ್ಯಾರ್ಥಿಗಳಿಗೆ ತಲಾ ರೂ 25,000/–(ಇಪ್ಪತ್ತೈದು ಸಾವಿರ ರೂಗಳು ಮಾತ್ರ )ಗಳ ಪ್ರೋತ್ಸಾಹಧನವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮೆಮಾಡುವುದೆಂದು ತಿರ್ಮಾನಿಸಲಾಯಿತು. ಆಯಾ ವರ್ಷ ತೇರ್ಗಡೆ ಹೊಂದಿರುವವರಲ್ಲಿ ಪರಿಶಿಷ್ಟ ಜಾತಿ–07 ಮತ್ತು ಪರಿಶಿಷ್ಟ ಪಂಗಡ–03 ಒಟ್ಟು 10 ಜನ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಹೆಚ್ಚು ಅಂಕಗಳಿಸಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವನ್ನು ನೀಡುವುದು. ಎರಡನೆಯದಾಗಿ ವಿದ್ಯಾರ್ಥಿಗಳ ಸಂಖ್ಯೆ 7:3ರ ಅನುಪಾತಕ್ಕಿಂತ ಕಡಿಮೆ ಇದ್ದರೆ ಅಷ್ಟೇ ವಿದ್ಯಾರ್ಥಿಗೆ ಪ್ರೋತ್ಸಾಹ ಧನವನ್ನು ನೀಡುವುದು. ಮೊದಲ ಬಾರಿಗೆ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಮಾತ್ರ ಪ್ರೋತ್ಸಾಹ ಧನ ನೀಡುವಂತೆ ಸಭೆಯು ತೀರ್ಮಾನಿಸಿತು.

2. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ರಾಜ್ಯ ರಾಷ್ಟ್ರೀಯ ಹಾಗೂ ಅಂತರ್ ರಾಷ್ಟ್ರೀಯ ಸಮ್ಮೇಳನಗಳಲ್ಲಿ Paper Presentaion ಮಾಡುವ ಸಂಬಂಧ ತಗಲುವ ವೆಚ್ಚವನ್ನು ಭರಿಸುವುದು. ನಮ್ಮ ಸಂಸ್ಥೆಯಿಂದ ವಿದ್ಯಾರ್ಥಿಗಳು Paper Presentaion ಮಾಡಲು ಸಮ್ಮೇಳನಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವಂತೆ ಎಲ್ಲ ವಿಭಾಗಗಳ ಅಧ್ಯಾಪಕ ವರ್ಗದವರಿಗೆ, ಹಾಗೂ ವಿದ್ಯಾರ್ಥಿಗಳಿಗೆ ತಿಳಿಸಲು ಸಭೆಯು ತೀರ್ಮಾನಿಸಿತು.

3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಒಳರೋಗಿಗಳು ಮತ್ತು ಹೊರರೋಗಿಗಳಿಗೆ ಚಿಕಿತ್ಸಾ ವೆಚ್ಚವನ್ನು ಉಚಿತವಾಗಿ ಭರಿಸಲು ಸಂಬಂದಿಸಿದಂತೆ ಪ್ರಚಾರವನ್ನು ಈಗಾಗಲೇ ಆಸ್ಪತ್ರೆಗಳಲ್ಲಿ ಮಾಡಲಾಗಿದೆ. ಇನ್ನೂ ಹೆಚ್ಚಾಗಿ ಪ್ರಚಾರ ಮಾಡಲು ದಪ್ಪ ಅಕ್ಷರಗಳಲ್ಲಿ ಬೋರ್ಡ್‌ಬರೆಸಿ ಅನೇಕ ಕಡೆಗಳಲ್ಲಿ ಅಳವಡಿಸಲು ತೀರ್ಮಾನಿಸಿತು ಮತ್ತು ಕರಪತ್ರವನ್ನು ಹೊರಡಿಸಿ ಪ್ರಚಾರ ಮಾಡಲು ಹಾಗೂ ಹೆಚ್ಚಿನ ಪ್ರಚಾರಕ್ಕೆ ಟಿ.ವಿ.ಚಾನಲ್ ಗಳಲ್ಲಿ ಪಬ್ಲಿಸಿಟಿಯನ್ನು ಮಾಡಿ ಅದರ ವೆಚ್ಚವನ್ನು ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿ ಭರಿಸಬಹುದೆಂದು ತೀರ್ಮಾನಿಸಿತು. ಎಲ್ಲಾ ಎಸ್‌ಸಿ/ಎಸ್‌ಟಿ ರೋಗಿಗಳಿಗೆ ಯೋಜನೆಯ ಉಪಯೋಗ ತಲುಪುವಂತೆ ನೋಡಿಕೊಳ್ಳುವುದೆಂದು ಸಭೆಯು ತೀರ್ಮಾನಿಸಿತು.

4. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉಪಯೋಜನೆಯಡಿ ವಿದ್ಯಾರ್ಥಿ ನಿಲಯದ ಕಟ್ಟಡಗಳ ನಿರ್ಮಾಣದ ವೆಚ್ಚಕ್ಕಾಗಿ ಶೇಕಡ 23(18+5) ರಂತೆ ವೆಚ್ಚಭರಿಸಲು ಸೂಚಿಸಲಾಗಿದೆ. ಈ ವಿಷಯವನ್ನು ಚರ್ಚಿಸಲಾಯಿತು. ಹಾಸ್ಟಲ್ ಕಟ್ಟಡ ರಿಪೇರಿ ಕಾಮಗಾರಿಗಳಿಗೆ, ಆದೇಶದಲ್ಲಿ ನಮೂದಿಸಿರುವಂತೆ ಅಂದಾಜು ಪಟ್ಟಿಯ ಮೊತ್ತದ ಶೇಕಡ 23 (18+5) ರ ಅನುಪಾತ ಪ್ರಮಾಣದಲ್ಲಿ(Ratio)ಉಪಯೋಗಿಸಿಕೊಳ್ಳಲು ಸರ್ಕಾರದ ಅನುಮೋದನೆ ಪಡೆಯಲು ಸಭೆಯು ಸೂಚಿಸಿತು.

5. 4210 ಲೆಕ್ಕಶಿರ್ಷಿಕೆಯಲ್ಲಿ SCSP ರೂ,233.00 ಲಕ್ಷಗಳು ಮತ್ತು TSP ಗೆ ಲೆಕ್ಕಶಿರ್ಷಿಕೆಯಲ್ಲಿ ರೂ, 91.00 ಲಕ್ಷಗಳು ಹಂಚಿಕೆಯಾಗಿದ್ದು ಈ ಹಣವನ್ನು ಲಚ್ಚರರ್‌ಹಾಲ್ ನಿರ್ಮಾಣ, ಸುಟ್ಟಗಾಯಗಳ ವಾರ್ಡ್‌ನಿರ್ಮಾಣ, ಒಟಿನಿರ್ಮಾಣ, ಅಗ್ನಿನಿರೋಧಕವ್ಯವಸ್ಥೆ, ಬಾಲಕ/ಬಾಲಕಿಯರ ವಸತಿನಿಲಯಕ್ಕೆ ವಾರ್ಡ್‌ರೊಬ್ಸ್, ಕಾಂಪೌಂಡ್, ಕೊಳವೆಬಾವಿಗಳನ್ನು ಹಾಕಿಸುವುದು, ಮೆಡಿಕಲ್ ಓಪಿಡಿ ಹಾಗೂ ಆರ್ಥೋಪೆಡಿಕ್ ಓಪಿಡಿಗೆ ಶೆಲ್ಟರ್ ಹಾಕಿಸುವುದು ಮತ್ತು ಮೆಡಿಕಲ್ ಓಪಿಡಿ ಹಾಗೂ ಆರ್ಥೋಪೆಡಿಕ್ ಓಪಿಡಿಗೆ ಅಲ್ಯುಮಿನಿಯಂ, ಐರನ್ ಗ್ರಿಲ್ಸ್‌ಗಳನ್ನು ಹಾಕಲು ತಿರ್ಮಾನಿಸಿ ಇದನ್ನು ಸರ್ಕಾರದ ಅನುಮೋದನೆ ಪಡೆಯಲು ಸಭೆಯು ಸೂಚಿಸಿತು.

6. ಎಲ್ಲಾ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರುಗಳನ್ನು ಕರೆದು ಚರ್ಚಿಸಿ ವಿಷಯವನ್ನು ವಿವರಿಸಿ ಸಲಹೆ ಪಡೆಯಲು ತಿರ್ಮಾನಿಸಲಾಯಿತು. ಹಾಗೂ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯ ಗೊಂಡಿತು.

| | | |
|---|---|---|
| ಮುಖ್ಯಆಡಳಿತಾಧಿಕಾರಿಗಳು,<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಮಂಡ್ಯ. | ಆರ್ಥಿಕ ಸಲಹೆಗಾರರು,<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಮಂಡ್ಯ. | ವೈದ್ಯಕೀಯ ಅಧೀಕ್ಷಕರು,<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಮಂಡ್ಯ. |
| ಡಾ॥ ಹನುಮಂತಪ್ರಸಾದ್<br>ನೋಡಲ್ ಅಧಿಕಾರಿ<br>(ಪ.ಜಾ&ಪ.ಪ ಉಪಯೋಜನೆ ಸಮಿತಿ)<br>ಮಿಮ್ಸ್ ಮಂಡ್ಯ | ಡಾ॥ ಬಿ.ಜೆ.ಮಹೇಂದ್ರ<br>ಸದಸ್ಯರು<br>ಮಿಮ್ಸ್ ಮಂಡ್ಯ. | ನಿರ್ದೇಶಕರು,<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಮಂಡ್ಯ. |